ಕ್ರಿಮಿನಲ್ ಕೇಸ್ ನಂ.681 2019
ಪಿ.ಡಬ್ಲ್ಯೂ : 1

ಸಾಕ್ಷಿಗೆ ದಿನಾಂಕ :05-12-2023 ರಂದು ಪ್ರಮಾಣಿಕರಿಸಲಾಯಿತು.
ಪಾಟೀ ಸವಾಲು : ಶ್ರೀ ಎಮ್ ಎಸ್ ಎಚ್ ವಕೀಲರಿಂದ

1. ನಾನು ವ್ಯವಸಾಯ ಮಾಡುತ್ತೇನೆ. ನಾನು ವ್ಯವಸಾಯದ ಜೊತೆ ಗುತ್ತಿಗೆದಾರ ಕೆಲಸ ಕೂಡಾ ಮಾಡುತ್ತೇನೆ. ನಾನು ಕಳೆದ 6-7 ವರ್ಷಗಳಿಂದ ಪ್ರಥಮ ದರ್ಜೆ ಗುತ್ತಿಗೆ ದಾರನಾಗಿದ್ದು ಈಗ ನಾನು ತೆರಿಗೆದಾರನಾಗಿದ್ದು ಈ ಮೊದಲು ನಾನು ತೆರಿಗೆ ಕಟ್ಟುತ್ತಿರಲಿಲ್ಲ. ನಾನು ಎಮ್ ಎಸ್ ಸಿ ಪಧವಿದರ. ನಾನು ಪ್ರಥಮ ಗುತ್ತಿಗೆ ಆಗುವ ಪೂರ್ವದಲ್ಲಿ 2 ನೇ ದರ್ಜೆ ಗುತ್ತಿಗೆದಾರನೆಂದು 1 ವರೆ ವರ್ಷದವರೆಗೆ ಇದ್ದೆ. 2 ನೇ ದರ್ಜೆ ಗುತ್ತಿಗೆದಾರ ಆಗಲು ನಾನು 3 ನೇ ದರ್ಜೆ ಗುತ್ತಿಗೆದಾರನಾಗಿ 6 ತಿಂಗಳು ನಾನು ಅನುಭವ ಪಡೆದಿರುತ್ತೇನೆ. ನನಗೆ ಸಂಬಂಧಿಸಿದಂತೆ ಗುತ್ತಿಗೆದಾರ ಬಿಲ್ ಗಳಲ್ಲಿ ಅದರಲ್ಲಿ TDS ಕಟ್ಟಾಗಿ ಬರುತ್ತದೆ ಎಂದರೆ ನಿಜ.

2. ತೆರಿಗೆ ವಿನಾಯಿತಿ ತೋರಿಸಲು TDS ಖರ್ಚಾಗಿದ್ದನ್ನು ತೋರಿಸಿ ನಂತರ ತೆರಿಗೆ ಕಛೇರಿಯಿಂದ ಮರಳಿ ಹಣ ಪಡೆಯುತ್ತೇನೆ. ಸದರಿ ನಾನು ತೆರಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಕಟ್ಟುತ್ತಾ ಬಂದಿರುತ್ತೇನೆ. ಆರೋಪಿ ಸಿಂದಗಿಯ ಎ ಪಿ ಎಮ್ ಸಿ ಕಛೇರಿಯಲ್ಲಿ ಯಾವ ವರ್ಷದಿಂದ ಯಾವ ವರ್ಷದವರಗೆ ಕೆಲಸ ಮಾಡಿರುತ್ತಾನೆ ಎಂದು ನಾನು ಬರೆಸಿಲ್ಲ. ಆರೋಪಿ ನನಗೆ ಆತ್ಮಿಯನಾಗಿದ್ದು ಆತನ ಕುಟುಂಬದ ಬಗ್ಗೆ ನನಗೆ ಪರಿಚಯ ಇದೆ. ಆರೋಪಿ ಮುದ್ದೇಬಿಹಾಳ ತಾಲೂಕಿನ ಸರೂರ ಗ್ರಾಮದವನಾಗಿರುತ್ತಾನೆ.

3. ಅರೋಪಿತನಿಗೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಇದ್ದಾಳೆ ಎಂದು ಕೇಳಿರುತ್ತೇನೆ. ನನಗೆ ಅಷ್ಟು ನಿಖರವಾಗಿ ಮಾಹಿತಿ ಇಲ್ಲ. ದಿನಾಂಕ 23-11-2016 ರ 10 ದಿನಗಳ ಕೆಳಗಡೆ ದಿನಾಲು ತನ್ನ ಹಣದ ಅವಶ್ಯಕತೆಗಾಗಿ ಕೇಳುತ್ತಿದ್ದರು. ನನಗೆ ಆರೋಪಿ ಪ್ರಥಮವಾಗಿ ಯಾವ ದಿನಾಂಕದಂದು ಹಣ ಬೇಡಿಕೆ ಇಟ್ಟಿರುತ್ತಾನೆ ಎಂದು ಹೇಳಲು ನಿಖರವಾಗಿ ದಿನಾಂಕ ಗೊತ್ತಿಲ್ಲ ಹಣ ಕೊಡುವ 10 ದಿನಗಳ ಕೆಳಗಡೆ ಕೇಳಿದ್ದ.

4. ರೂಪಾಯಿ 25 ಲಕ್ಷ ಹಣ ನನ್ನ ಕಡೆ ನಗದು ರೂಪದಲ್ಲಿತ್ತು. ನಾನು ನನ್ನ ಸ್ವಂತ ಆಸ್ತಿ ಮಾರಿದ ಹಣ ಇತ್ತು ಮತ್ತು ನನ್ನ ವ್ಯವಸಾಯದಿಂದ ಬಂದ ಲಾಭದ ಹಣ ಇತ್ತು ಆ ಹಣದ ಸಂಗ್ರಹಣೆಯಿಂದ ಕೊಟ್ಟಿದ್ದೆ ಆದರೆ ನನಗೆ ಯಾವ ಆಸ್ತಿ ಮಾರಾಟ ಮಾಡಿರುತ್ತೇನೆ ಅದರ ಸರ್ವೇ ನಂಬರ ನನಗೆ ನೆನಪಿಲ್ಲ. ಸದರಿ ಜಾಗೆಯನ್ನು 16 ಲಕ್ಷ ರೂಪಾಯಿಗೆ ಪ್ರತಿಫಲ ಹಣಕ್ಕೆ ಮಾರಾಟ ಮಾಡಿರುತ್ತೇನೆ. ನಾನು ಆರೋಪಿತನಿಗೆ 4-5 ದಿನಗಳ ಹಿಂದೆ ಆಸ್ತಿಯನ್ನು ಮಾರಾಟ ಮಾಡಿರುತ್ತೇನೆ. ಸದರಿ ನನ್ನದು ಮೂಲತಹ 80 ಎಕರೆ ಜಮೀನು ಇದ್ದು ಅದರಲ್ಲಿ ಬೆಲ್ಲ ಮಾರಾಟ ಮಾಡಿದ ಮತ್ತು ನಿಂಬೆ ಹಣ್ಣು ಮಾರಾಟ ಮಾಡಿದ ಹಣ ನನ್ನ ಹತ್ತಿರ ಇತ್ತು. ಸದರಿ 2-3 ವರ್ಷಗಳ ಸಂಗ್ರಹಿಸಿಟ್ಟ ಹಣ ಅಂದಾಜು 9 ರಿಂದ 10 ಲಕ್ಷ ರೂಪಾಯಿ ಹಣ ನನ್ನ ಬಳಿ ಇತ್ತು.

5. ಬೆಲ್ಲವನ್ನು ನಾವೆ ಸ್ವಂತ ತಯಾರಿಸುತ್ತೇವೆ. ಮಾರಾಟಗಾರರು ಪಡೆದುಕೊಂಡ ನಂತರ ರಶೀದಿ ನಾವು ಕೊಡುವದಿಲ್ಲ ಕಾರಣ ಅಲ್ಲಿಯೇ ಸ್ಥಳಿಯರು ಬಂದು ತೆಗೆದುಕೊಂಡು ಹೋಗುತ್ತಾರೆ ಎಂದು ಹೇಳುತ್ತಾರೆ. ಸದರಿ ಬೆಲ್ಲ ಮತ್ತು ನಿಂಬೆ ಹಣ್ಣನ್ನು ಮಾರಾಟ ಮಾಡಿದಲ್ಲಿ ಎ ಪಿ ಎಮ್ ಸಿ ಮಾರುಕಟ್ಟೆಯಲ್ಲಿ ರೇಶಿದಿ ಕೋಡುತ್ತಾರೆ ಎಂದರೆ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದರೆ ಸಿಗುವದು ಸ್ಥಳಿಯಲ್ಲಿ ಕೊಟ್ಟರೆ ರಶೀದಿ ಕೊಡುವದಿಲ್ಲ ಎಂದು ಹೇಳುತ್ತಾರೆ.

6. ನಮ್ಮದು ಜಂಟಿ ಕುಟುಂಬ ಇರುವ ಕಾರಣ ಬೆಲ್ಲ ಮತ್ತು ಇತರ ಬೆಳೆಗಳ ಲೆಕ್ಕಪತ್ರ ಎಲ್ಲರು ಸೇರಿಯೇ ಮಾಡುತ್ತೇವೆ ಎಂದು ಹೇಳುತ್ತಾರೆ. ಸದರಿ ಎಷ್ಟು ರೈತರಿಗೆ ಬೆಲ್ಲ ಮತ್ತು ಇತರೆ ಸಾಮಗ್ರಿ ಕೊಟ್ಟಿರುತ್ತೇವೆ ಮತ್ತು ಇತರೆ ಕುರಿತು ಪುಸ್ತಕದಲ್ಲಿ ನಮೂದಿಸುತ್ತೇವೆ ಎಂದರೆ ಆ ರೀತಿಯಾಗಿ ನಾವು ಯಾವುದೇ ಪುಸ್ತಕದಲ್ಲಿ ಲೆಕ್ಕ ಬರೆಯುವುದಿಲ್ಲ ಎಂದು ಹೇಳುತ್ತಾರೆ. ನಾನು ಖಾಲಿ ನಿವೇಶನ ಮಾರಾಟ ಮಾಡಿದ್ದು ಖರೀದಿ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ರೀತಿಯ ತೊಂದರೆ ಇರುವುದಿಲ್ಲ. ನಾನು ಖಾಲಿ ನಿವೇಶನ ಮಾರಾಟ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ನಾನು ಸಾಲ ಕೊಟ್ಟ ನನ್ನ ತೆರಿಗೆ ತುಂಬುವ ಸಮಯದಲ್ಲಿ ತೋರಿಡಸಿಕೊಳ್ಳಲು ನನಗೇನು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ವ್ಯವಯಸಾಗಾರನಾಗಿರುವುದರಿಂದ ಜಂಟಿ ಕುಟುಂಬದಲ್ಲಿರುವ ಕಾರಣ ತೋರಿಸಿಲ್ಲ ಎಂದು ಹೇಳುತ್ತಾರೆ.

8. ಆರೋಪಿಗೆ ಹಣವನ್ನು ವಿದ್ಯಾನಗರ ಸ್ನೇಹ ಸದನ ಎಂಬ ಮನೆಯಲ್ಲಿ ನೀಡಿರುತ್ತೇನೆ. ಸದರಿ ಮನೆ ವಿಜಯಪೂರ ರಸ್ತೆಗೆ ಇದೆ. ಆ ಮನೆ ದೀಪಕ ಎಂಬ ವ್ಯಕ್ತಿಗೆ ಸಂಬಂಧಿಸಿದ್ದು ಆತ ನನಗೆ ಮತ್ತು ಆರೋಪಿತನಿಗೆ ಗೆಳೆಯನಾಗಿದ್ದ. ನಾನು ಹಣ ಕೊಟ್ಟಾಗ ರಾತ್ರಿ 8.15 ಗಂಟೆ ಆಗಿರಬಹುದು. 500 ರೂಪಾಯಿ ಮುಖ ಬೆಲೆಯ 50 ಬಂಡಲ್ಗಳು ಇದ್ದವು. ಸದರಿ ಸ್ಟ್ಯಾಂಪ ಆರೋಪಿತನೆ ತೆಗೆದುಕೊಂಡು ಬಂದಿದ್ದ. ಆ ಸಮಯದಲ್ಲಿ ಆರೋಪಿ ಇಂಡಿಯಲ್ಲಿ ಕೆಲಸ ಮಾಡುತ್ತಿದ್ದ. ಸ್ಟ್ಯಾಂಪನ್ನು ಬೆರಳಚ್ಚು ಮಾಡಿ ಆರೋಪಿತನೆ ತೆಗೆದುಕೊಂಡು ಬಂದಿದ್ದ. ಸದರಿ ಸ್ಟ್ಯಾಂಪನ್ನು ಬೆರಳಚ್ಚು ಮಾಡುವ ಸಮಯದಲ್ಲಿ ಹಣ ಕೊಟ್ಟಿರಲಿಲ್ಲ ಎಂದರೆ ಆಗ ಕೊಟ್ಟಿರಲಿಲ್ಲ ಸ್ಟ್ಯಾಂಪ ಬೆರಳಚ್ಚು ಮಾಡಿಕೊಂಡು ಬಂದ ನಂತರ ಕೊಡುತ್ತೇನೆ ಎಂದು ಹೇಳಿದ್ದು ಕೊಟ್ಟ ನಂತರ ಹಣ ಕೊಡುತ್ತೇನೆ ಎಂದು ಹೇಳುತ್ತಾರೆ.

9. (ಸ್ಟಾಂಪ್) ನಿಪಿ 6 ಇದು ಸಹಿ ಪಡೆದುಕೊಂಡು ನಂತರ ಬೆರಳಚ್ಚು ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ.3 ರಲ್ಲಿ ಕೈಗಡ ಪತ್ರದ ಬಗ್ಗೆ ನಮೂದಿಸಿಲ್ಲ ಎಂದರೆ ನಿಜ. ನಿಪಿ 6 ದಾಖಲೆ ಸೃಷ್ಟಿ ಮಾಡಿದ

ದಾಖಲೆ ಎಂದರೆ ಸರಿಯಲ್ಲ. ಆರೋಪಿಗೆ ಹಣ ಕೊಡುವಷ್ಟು ಹಣಕಾಸಿನ ಸಾಮರ್ಥ್ಯ ನನಗೆ ಇದೆ ಎಂದು ತೋರಿಸಲು ದಾಖಲೆಗಳನ್ನು ಸಲ್ಲಿಸಿಲ್ಲ ಬೇಕಾದರೆ ಸಲ್ಲಿಸುತ್ತೇನೆ ಎಂದು ಹೇಳುತ್ತಾರೆ.

10. ಆರೋಪಿ ಖಾಯಂ ತರೀಖವಾಗಿ ಸರೂರ ಗ್ರಾಮದಲ್ಲಿ ವಾಸವಾಗಿರುತ್ತಾನೆ ಎಂದರೆ ನಿಜ. ಆರೋಪಿಗೆ ನಿಪಿ 3 ರ ದಾಖಲೆ ಸರೂರ ಗ್ರಾಮ ವಿಳಾಸ ತೋರಿಸಿ ಕಳುಹಿಸಿಲ್ಲ ಎಂದರೆ ನಿಜ. ಕಾರಣ ಆತ ಎಲ್ಲಿ ಕೆಲಸ ಮಾಡುತ್ತಿದ್ದ ಅಲ್ಲಿ ಕಳುಹಿಸಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿ ಯಾವತ್ತು ಸಿಂದಗಿಯಲ್ಲಿಯೇ ಕೆಲಸ ಮಾಡುತ್ತಿದ್ದ ಎಂದರೆ ಆತನನ್ನು ಡೆಪಟೇಶನ ಕೆಲಸದ ಮೇಲೆ ಇಂಡಿಗೆ ಹಾಕಿದ್ದರು ಎಂದು ಹೇಳುತ್ತಾರೆ. ಆರೋಪಿತನನ್ನು ಚಡಚಣ ಚೆಕಪೋಸ್ಟ ಡೆಪಟೇಶನ ಮೇಲೆ ನೌಕರಿಗೆ ಹಾಕಿದ್ದರು ಎಂದರೆ ಆ ವಿಷಯ ನನಗೆ ಗೊತ್ತಿಲ್ಲ. ಆರೋಪಿತನಿಗೆ ಬೇಡಿಕೆ ನೋಟಿಸ್ ಜಾರಿಯಾಗಬಾರದೆಂಬ ಉದ್ದೇಶಕ್ಕಾಗಿ ಸರೂರ ಗ್ರಾಮಕ್ಕೆ ನೋಟಿಸ್ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ. ಬೇಡಿಕೆ ನೋಟಿಸ್ ಆರೋಪಿಗೆ ತಲುಪಿಲ್ಲ ಎಂದರೆ ಆ ಕುರಿತು ನನಗೆ ಗೊತ್ತಿಲ್ಲ.

11. ನಾನು ಆರೋಪಿತನಿಗೆ ಯಾವುದೇ ಹಣ ಕೊಟ್ಟಿಲ್ಲ ಮತ್ತು ಆತ ನನಗೆ ಚೆಕ್ಕನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ 6 ರಲ್ಲಿ ಪಿ ಜಿ ಕುಷ್ಟಗಿ ಎಂದು ಹೆಸರಿಸಿದ ಸಹಿ ಆರೋಪಿತನ ಹೆಂಡತಿಯದು ಅವಳ ಪೂರ್ಣ ಹೆಸರು ನನಗೆ ಗೊತ್ತಿಲ್ಲ. ನಿಪಿ 6 ರಲ್ಲಿ ಆರೋಪಿತನ ಹೆಂಡತಿಯ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಅದು ಅಲ್ಲದೇ ಆರೋಪಿತನ ಹೆಂಡತಿಯ ಹೆಸರು ಪಿ ಜಿ ಕುಷ್ಟಗಿ ಅಂತಾ ಇರುವುದಿಲ್ಲ ಎಂದರೆ ಸರಿಯಲ್ಲ. ಕೈಗಡ ಪತ್ರದಲ್ಲಿ ತಯಾರಿಸಿದ ಸಹಿಗಳು ಆರೋಪಿತನದು ಮತ್ತು ಪಿ ಜಿ ಕುಷ್ಟಗಿ ಎನ್ನುವದು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ನಿಪಿ 6 ರ ದಾಖಲೆ ಖೊಟ್ಟಿಯಾಗಿ ತಯಾರಿಸಿದ ದಾಖಲೆ ಎಂದರೆ ಸರಿಯಲ್ಲ.

12. ನಿಪಿ. 1 ರ ಮೇಲೆ ಬರವಣಿಗೆ ಯಾರದು ಎಂದು ನನಗೆ ಗೊತ್ತಿಲ್ಲ ಆರೋಪಿ ತೆಗೆದುಕೊಂಡು ಬಂದು ನನ್ನ ಸಮಕ್ಷಮ ಸಹಿ ಮಾಡಿ ಕೊಟ್ಟಿರುತ್ತಾನೆ. ಚೆಕ್ಕನ್ನು ನನ್ನ ಮುಂದೆ ಸಹಿ ಮಾಡಿ ಕೊಟ್ಟಿರುತ್ತಾನೆ. ಆ ಚೆಕ್ಕಿನಲ್ಲಿ ಹೆಸರು ಮತ್ತು ದಿನಾಂಕ ಮೊದಲೇ ಬರೆದಿತ್ತು. ಚೆಕ್ಕಿನಲ್ಲಿ ಮಸಿಗಳ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಮತ್ತು ನನ್ನ ಮಧ್ಯ ಯಾವುದೇ ಹಣದ ವ್ಯವಹಾರ ಆಗಿಲ್ಲ ಆರೋಪಿ ನನಗೆ ಯಾವುದೇ ಚೆಕ್ ಕೊಟ್ಟಿಲ್ಲ ಎಂದರೆ ಸರಿಯಲ್ಲ.

13. ದಿನಾಂಕ 30-07-2019 ರಂದು ಆರೋಪಿ ಒಬ್ಬರೇ ಸಿಂದಗಿ ಬಸ್ ನಿಲ್ದಾಣದ ಹತ್ತಿರ ಲೋಣಿ ಹೋಟೆಲ ಮುಂದೆ ಬೆಳಿಗ್ಗೆ 7 ಗಂಟೆಗೆ ಬಂದು ನನಗೆ ಚೆಕ್ ನೀಡಿರುತ್ತಾನೆ. ನನಗೆ ಒಬ್ಬ ಮಹೇಂದ್ರ ಮಿರಗಿ

ಸಾಃ ಕೋರಳ್ಳಿ ಇವರ ಪರಿಚಯ ಇಲ್ಲ. ಎಸ್ ಬಿ ಮನಗೂಳಿ ಜಮಖಂಡಿ ಇವರ ಪರಿಚಯ ಇಲ್ಲ. ನನ್ನ ಮತ್ತು ಆರೋಪಿತನ ಮಧ್ಯ ಯಾವುದೇ ವ್ಯವಹಾರ ಇದ್ದಿರಲಿಲ್ಲ. ಮಹೇಂದ್ರ ಮಿರಗಿ ಮತ್ತು ಆರೋಪಿತನ ಮಧ್ಯ ಇರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ಮಹೆಂದ್ರ ಮಿರಗಿ ಇವರಿಗೆ ಕೊಟ್ಟ ಖಾಲಿ ಚೆಕ್ಕನ್ನು ನಾನು ದುರುಪಯೋಗಪಡಿಸಿಕೊಂಡು ಈ ಸುಳ್ಳು ಪಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 1 ರಲ್ಲಿ ಬರೆದ ಚೆತನಕುಮಾರ 25 ಲಕ್ಷ ರೂಪಾಯಿ ಮತ್ತು ದಿನಾಂಕ 3  ವಿಷಯಗಳು ಆರೋಪಿ ಸ್ವತಹ ಬರೆದಿದ್ದು ಅಲ್ಲ ಎಂದರೆ ಸರಿಯಲ್ಲ.

14. ನಾನು ಕಳುಹಿಸಿದ ನಿಪಿ 3 ಬೇಡಿಕೆ ನೊಟಿಸ್ ಕಾನೂನುಬದ್ದವಾಗಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಸದರಿ ಬೇಡಿಕೆ ನೋಟಿಸ್ ಜಾರಿಯಾಗದೇ ಇರುವ ಕಾರಣ ಪಿರ್ಯಾದಿ ಊರ್ಜಿತವಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಖಾಲಿ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಸಿಂದಗಿ